308 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಬಿದರಿ ಗ್ರಾಮದ ಹತ್ತಿರ ಕೃಷ್ಣಾ ನೀರಿನ ಹಿನ್ನೀರಿನಿಂದ ಬಿಜಾಪುರ ಜಿಲ್ಲೆಯ ಗುಣದಾಳವನ್ನು ಜೋಡಿಸುವ ರಸ್ತೆ ಇತ್ತೀಚೆಗೆ ಮಳೆಯಿಂದ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ರೀತಿ ಎಷ್ಟು ಬಾರಿ ರಸ್ತೆ ಕೊಚ್ಚಿ ಹೋಗಿದೆ;

ಇ) ಇದಕ್ಕೆ ಶಾಶ್ವತವಾದ ಚಿಕ್ಕ ಸೇತುವೆ ನಿರ್ಮಾಣ ಅಗತ್ಯವಿದ್ದು, ಅದನ್ನು ಇದೇ ಬೇಸಿಗೆಯಲ್ಲಿ ನಿರ್ಮಿಸುವ ನಿರ್ಧಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ಬಂದಿದೆ.

ಆ) ಎರಡು ಬಾರಿ, 2007 ಮತ್ತು 2009ರಲ್ಲಿ.

ಇ) ಶಾಶ್ವತವಾದ ಚಿಕ್ಕ ಸೇತುವೆ ನಿರ್ಮಾಣ ಕೈಗೆತ್ತಿಕೊಳ್ಳುವ ನಿಟ್ಟಿನಲ್ಲಿ ನಿಗಮದಲ್ಲಿ ರೂ.234.00 ಲಕ್ಷಗಳಿಗೆ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದ್ದು, ಈ ಕಾಮಗಾರಿಗಾಗಿ 2009–10 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ರಡಿ ಅನುದಾನವನ್ನು ಒದಗಿಸಲಾಗುತ್ತಿದೆ.

210 ಶ್ರೀ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಗರನೀಡ ಗ್ರಾಮದಲ್ಲಿ ಬರುವ ವಿತರಣೆ ಕಾಲುವೆ ನಂ. 13, 14, 15ರಲ್ಲಿ ಹೂಳು ತುಂಬಿದ್ದು, ಕಾಲುವೆ ನೀರು ರೈತರ ಹೊಲದಲ್ಲಿ ಹರಿದು ಹೋಗಿ ಬೆಳೆ ಮತ್ತು ಜಮೀನು ನಾಶವಾದದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಕಾಲುವೆಗಳ ಹೂಳು ತೆಗೆಸಲು ಯಾಕೆ ವಿಳಂಬ ಮಾಡುತ್ತಿದೆ;

ಇ) ಸದರಿ ಕಾಲುವೆಗಳ ಹೂಳನ್ನು ಎಂದು ತೆಗೆಯಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಇಂಡಿ ಶಾಖಾ ಕಾಲುವೆಯ ವಿತರಣಾ ಕಾಲುವೆ ಸಂ:25 ರಡಿಯಲ್ಲಿ ಬರುವ ಶೀಳುಗಾಲುವೆ ಸಂ:13,14 ಮತ್ತು 15 ರಲ್ಲಿ ಹೂಳು

ತುಂಬಿರುವುದು (ಭಾಗಶಃ) ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಆದರೆ ಇದರಿಂದಾಗಿ ಬೆಳೆ ಮತ್ತು ಜಮೀನುಗಳು ನಾಶವಾಗಿರುವುದಿಲ್ಲ. ಇತ್ತೀಚಿನ ಅಕ್ಟೋಬರ್ 2009 ರಲ್ಲಿ ಆದ ಭಾರಿ ಮಳೆಯಿಂದ ಉಂಟಾದ ಅತಿವೃಷ್ಟಿಯಿಂದ ಬೆಳೆ ಮತ್ತು ಜಮೀನುಗಳು ಹಾನಿಗೆ ಒಳಗಾಗಿ ರೈತರಿಗೆ ತೊಂದರೆಯಾಗಿರುವುದು ಸರ್ಕಾರ ಗಮನಿಸಿದೆ.

ಆ) 6 ಕಿ.ಮೀ. ಉದ್ದದ ಶೀಳುಗಾಲುವೆ–13 ರಲ್ಲಿ ಹೂಳು ತೆಗೆಯುವ ದುರಸ್ತಿ ಕಾಮಗಾರಿಯನ್ನು ಪ್ರವಾಹ ಪರಿಹಾರ ಕಾರ್ಯಕ್ರಮದಡಿಯಲ್ಲಿ (ಸಿಆರ್ಎಫ್) ಜಿಲ್ಲಾ ಆಡಳಿತ ವತಿಯಿಂದ ನೀಡಲಾದ ರೂ.200.00 ಲಕ್ಷಗಳ ಅನುದಾನ ಅಡಿಯಲ್ಲಿ ಕೈಗೆತ್ತಿಕೊಂಡು ಈಗಾಗಲೇ ಪೂರ್ಣಗೊಳಿಸಲಾಗಿದೆ. ಮುಂದುವರೆದು ಶೀಳುಗಾಲುವೆ–14 ಮತ್ತು 15 ಅನುಕ್ರಮವಾಗಿ 1.20 ಕಿ.ಮೀ. ಹಾಗೂ 5.70 ಕಿ.ಮೀ. ಉದ್ದವಿದ್ದು ಸದರಿ ಕಾಲುವೆಗಳಲ್ಲಿಯ ಹೂಳು ತೆಗೆಯುವ ಕಾಮಗಾರಿಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ (ಎನ್.ಆರ್.ಇ.ಜಿ.ಎ.) ಕೈಗೊಳ್ಳುವ ಸಲುವಾಗಿ ರೂ.1.20 ಲಕ್ಷಗಳು ಮತ್ತು ರೂ.8.00 ಲಕ್ಷಗಳ ಅಂದಾಜು ಪ್ರಸ್ತಾವನೆಗಳನ್ನು ದಿನಾಂಕ: 22.09.2009 ರಂದು ಅಗರಖೇಡ ಗ್ರಾಮ ಪಂಚಾಯ್ತಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಈ ಸಂಬಂಧ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಇ) ಗ್ರಾಮ ಪಂಚಾಯಿತಿಯ ಅನುಮೋದನೆ ಪಡೆದು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.

318 ಶ್ರೀ ಚಿಕ್ಕಣ್ಣ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು, ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯವು ಸುಪ್ರಸಿದ್ಧ ಅಣೆಕಟ್ಟಾಗಿದ್ದು, ಈ ಅಣೆಕಟ್ಟನ್ನು ಕೆ.ಆರ್.ಎಸ್ ಮಾದರಿಯಲ್ಲಿ ಸುಂದರ ಉದ್ಯಾನವನ ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆಯೇ?

ಆ) ಉದ್ದೇಶಿಸಿದ್ದಲ್ಲಿ, ಈ ಕಾಮಗಾರಿಗೆ ನೀಲಿ ನಕ್ಷೆ ತಯಾರಿಸಲಾಗಿದೆಯೇ, ಹಾಗೂ ಕೈಗೊಳ್ಳಲಿರುವ ಮುಂದಿನ ಕ್ರಮವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ಹೌದು.